**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**

**Crl.Misc No**.465/2023
**PW** : 1

**ದಿನಾಂಕಃ** 01-03-2025 **ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ಸರ್ವಮಂಗಲ** |
| **ಗಂಡನ ಹೆಸರುಃ** | **ಧನಂಜಯ** |
| **ವಯಸ್ಸುಃ** | **35 ವರ್ಷ** |
| **ಉದ್ಯೋಗಃ** | **ಅಂಗನವಾಡಿಯಲ್ಲಿ ಆಯಾ** |
| **ವಾಸ ಸ್ಥಳಃ** | **ಗುಡುಗನಹಳ್ಳಿ** |

**ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ ಹೆಚ್.ವಿ.ಪಿ ವಕೀಲರಿಂದಃ**

1. ನಾನು 1 ನೇ ಅರ್ಜಿದಾರಳಾಗಿರುತ್ತೇನೆ. ಎದುರುದಾರ ನನ್ನ ಗಂಡನಾಗಿರುತ್ತಾನೆ. ದಿ. 25.05.2014 ರಂದು ಕೆ.ಆರ್.ನಗರ ತಾಲ್ಲೂಕಿನ, ಶ್ರೀರಾಂಪುರದ ಪ್ರಿಯದರ್ಶಿನಿ ಕಲ್ಯಾಣ ಮಂಟಪದಲ್ಲಿ ನನ್ನ ಮತ್ತು ಎದುರುದಾರನ ಮದುವೆ ಎರಡು ಕುಟುಂಬಗಳ ಉಪಸ್ಥಿತಿಯಲ್ಲಿ ಹಿಂದು ಸಂಪ್ರದಾಯದಂತೆ ಆಗಿರುತ್ತದೆ. ಮದುವೆ ಸಮಯದಲ್ಲಿ ನನ್ನ ಹೆತ್ತವರು ಎದುರುದಾರನಿಗೆ 25 ಗ್ರಾಂ ಚಿನ್ನದ ಕುತ್ತಿಗೆ ಚೈನು, 25 ಗ್ರಾಮ ತೂಕದ ಚಿನ್ನದ ಕೈ ಚೈನು, 7 ಗ್ರಾಂ ತೂಕದ ಚಿನ್ನದ ಬೆರಳುಂಗುರ, ಮತ್ತು 2,00,000/- ರೂ. ಹಣವನ್ನು, ಪ್ಯಾಶನ್ ಪ್ರೊ ಬೈಕ್ ನ್ನು ವರದಕ್ಷಿಣೆಯ ರೂಪದಲ್ಲಿ ನೀಡಿರುತ್ತಾರೆ. ಅಷ್ಟೇ ಅಲ್ಲದೇ ನನ್ನ ತವರು ಮನೆಯವರು ನನಗೆ 10 ಗ್ರಾಂ ತೂಕದ ಚಿನ್ನದ ಓಲೆಯನ್ನು ಕೊಟ್ಟಿರುತ್ತಾರೆ.

2. ಮದುವೆಯಾದ ಒಂದೂವರೆ ವರ್ಷದ ಕಾಲ ನನ್ನ ಮತ್ತು ಎದುರುದಾರನ ವೈವಾಹಿಕ ಸಂಬಂಧ ಅನ್ಯೋನ್ಯವಾಗಿತ್ತು. ಅದಾದನಂತರ ಎದುರುದಾರ ಕೆಲಸ ಮಾಡಲು ಹೋಗುತ್ತಿರಲಿಲ್ಲ. ಮನೆಗೆ ದಿನಸಿ ಸಾಮಾನು ತಂದುಕೊಡುವಂತೆ ನಾನು ಎದುರುದಾರನಲ್ಲಿ ಕೇಳಿದಾಗ ನೀನೆ ದುಡಿದು ಮನೆಗೆ ದಿನಸಿ ಸಾಮಾನು ತಾ ಎಂದು ಎದುರುದಾರ ನನಗೆ ಹೇಳಿರುತ್ತಾರೆ. ನಿನಗೆ ಗಂಡ ಬೇಕಾದರೆ ನೀನು ದುಡಿದು ಗಂಡನನ್ನು ಸಾಕಬೇಕು ಎಂದು ಎದುರುದಾರ ನನ್ನೊಂದಿಗೆ ಜಗಳ ಮಾಡಿ ನನಗೆ ಹೊಡೆಯುತ್ತಿದ್ದರು. ಎದುರುದಾರ ಸಾರಾಯಿ ಕುಡಿದು ಬಂದು ಸಹ ನನಗೆ ಅವಾಚ್ಯ ಶಬ್ದಗಳಿಂದ ಬೈದು, ನನಗೆ ಹೊಡೆದು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡಿರುತ್ತಾರೆ.

3. 2 ಮತ್ತು 3 ನೇ ಅರ್ಜಿದಾರರು ನನ್ನ ಮತ್ತು ಎದುರುದಾರನ ಮಕ್ಕಳಾಗಿರುತ್ತಾರೆ. ನನಗೆ ಮತ್ತು 2 ಹಾಗೂ 3 ನೇ ಅರ್ಜಿದಾರರಿಗೆ ಎದುರುದಾರನು ಹೊಡೆಯುವುದು ಮತ್ತು ಬೈಯುವುದು ಮಾಡಿ ನಮ್ಮನ್ನು ಮನೆಯಿಂದ ಹೊರಗೆ ಹಾಕಿ ಮನೆಗೆ ಬೀಗ ಹಾಕುತ್ತಿದ್ದರು. ನನ್ನ ಎ.ಟಿ.ಎಮ್ ಕಾರ್ಡನ್ನು ಸಹ ಎದುರುದಾರ ನನ್ನಿಂದ ಕಿತ್ತುಕೊಳ್ಳುತ್ತಿದ್ದರು. ಎದುರುದಾರ ಕೇವಲ ಇನಸ್ಟಾಗ್ರಾಂ ನಲ್ಲಿ ರೀಲ್ಸ ಮಾಡಿ ಹಾಕಿ ಕಾಲಹರಣ ಮಾಡುತ್ತಿದ್ದು, ಎದುರುದಾರರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನಮ್ಮನ್ನು ಸಾಕುತ್ತಿರಲಿಲ್ಲ. ತಾವು ಟೂರಿಗೆ ಎಂದು ಮನೆಯಿಂದ ಹೋದರೆ 15 ದಿನಗಳವರೆಗೆ ಎದುರುದಾರ ಮನೆಗೆ ಬರುತ್ತಿರಲಿಲ್ಲ. ಯಾಕೆ ಈ ರೀತಿ ಮಾಡುತ್ತಿದ್ದೀರಾ ಎಂದು ಎದುರುದಾರನಲ್ಲಿ ಪ್ರಶ್ನಿಸಿದರೆ ನನಗೆ ಬಿಜಿನೆಸ್ ಮಾಡಲು ನಿಮ್ಮ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಎದುರುದಾರ ನನ್ನಲ್ಲಿ ಹೇಳುತ್ತಿದ್ದರು.

4. ಎದುರುದಾರ, ಎದುರುದಾರನ ತಂದೆಯಾದ ಮೂರ್ತಯ್ಯ, ತಾಯಿಯಾದ ಶಿವಮ್ಮ, ಸಹೋದರಿಯಾದ ಸುಮಲತಾ, ಸಹೋದರನಾದ ಜಯಂತಕುಮಾರ ಎದುರುದಾರನ ಮಾವನಾದ ಅಪ್ಪಾಜಯ್ಯ ಮತ್ತು ಮಾವನ ಮಗನಾದ ವಿಷಕಂಠ ಇವರೆಲ್ಲರೂ ಸೇರಿ ನಮ್ಮ ಮನೆಯಿಂದ ವರದಕ್ಷಿಣೆ ತರುವಂತೆ ಹೇಳಿ ನನಗೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ನೀಡಿ ನನ್ನ ಕತ್ತು ಹಿಸುಕುತ್ತಿದ್ದರು. ನಂತರದಲ್ಲಿ ಸದರಿಯವರೆಲ್ಲರೂ ಸೇರಿ ರಾತ್ರಿಗೆ ನನ್ನನ್ನು ಮತ್ತು ಉಳಿದ ಅರ್ಜಿದಾರರನ್ನು ಮನೆಯಿಂದ ಹೊರಗೆ ಹಾಕಿದ್ದು, ಬೇರೆ ದಾರಿ ಕಾಣದೆ ನಾವು ನನ್ನ ತವರು ಮನೆಗೆ ಹೋಗಿರುತ್ತೇವೆ.

5. ನಾನು ಕೆಲಸಕ್ಕೆ ಹೋಗುತ್ತಿದ್ದಾಗ ಅನ್ಯ ಪುರುಷರೊಂದಿಗೆ ಮಾತನಾಡುತ್ತೇನೆ ಎಂದು ಎದುರುದಾರನ ಸಹೋದರನಾದ ಜಯಂತಕುಮಾರವರು ನನ್ನ ವಿರುದ್ಧ ಸುಳ್ಳು ಅಪಾದನೆ

ಮಾಡುತ್ತಿದ್ದರು. ನಾನು ಕೆಲಸಕ್ಕೆ ಹೋಗುವ ಸ್ಥಳಕ್ಕೆ ನನ್ನ ಅತ್ತೆ ಮಾವ ನನ್ನನ್ನು ಹಿಂಬಾಲಿಸುತ್ತಿದ್ದರು. ಎದುರುದಾರನು ಆಟೋ ರೀಕ್ಷಾ ಖರೀದಿ ಮಾಡಲು ನನ್ನ ತವರು ಮನೆಯಿಂದ ಹಣ ತರುವಂತೆ ನನಗೆ ಹಿಂಸಿಸುತ್ತಿದ್ದು, ಎದುರುದಾರನ ಹಿಂಸೆ ತಾಳಲಾರದೆ ನಾನು ನನ್ನ ತಂದೆ ತಾಯಿಯವರಿಗೆ ಸದರಿ ವಿಷಯ ತಿಳಿಸಿದ್ದು, ನನ್ನ ಜೀವನ ಸುಖಕರವಾಗಿರಲೆಂದು ಕಷ್ಟಪಟ್ಟು ನನ್ನ ತಂದೆ ತಾಯಿ ಎದುರುದಾರನಿ ಒಂದು ಆಟೋರಿಕ್ಷಾವನ್ನು ಕೊಟ್ಟಿರುತ್ತಾರೆ. ಆಟೋ ಖರೀದಿಸಿ ಕೊಟ್ಟ ನಂತರದಲ್ಲಿಯೂ ಸಹ ಬಿಜಿನೆಸ್ ಮಾಡಲು ಇನ್ನೂ ಹೆಚ್ಚಿನ ಹಣ ಬೇಕು ಎಂದು ಎದುರುದಾರನು ಹೆಚ್ಚಿನ ವರದಕ್ಷಿಣೆ ತರುವಂತೆ ನನ್ನಲ್ಲಿ ಬೇಡಿಕೆ ಇಟ್ಟಿರುತ್ತಾರೆ.

6. 2 ನೇ ಅರ್ಜಿದಾರರನ್ನು ನಾನು ಗುಡುಗನಹಳ್ಳಿಯ ಸರಕಾರಿ ಶಾಲೆಗೆ ದಾಖಲಿಸಿದ್ದು, ಅರ್ಜಿದಾರರ ಜೀವನಾಂಶಕ್ಕೆ ಎದುರುದಾರ ಯಾವುದೇ ಹಣವನ್ನು ನೀಡುತ್ತಿಲ್ಲ. 2 ನೇ ಅರ್ಜಿದಾರನ ಶಾಲೆಗೆ ಹೋಗಿ ಎದುರುದಾರನು ನನ್ನ ಗಮನಕ್ಕೆ ಬಾರದೆ 2 ನೇ ಅರ್ಜಿದಾರರನ್ನು ತನ್ನೊಂದಿಗೆ ಕರೆದುಕೊಂಡು ಹೋಗಿ 2-3 ತಿಂಗಳುಗಳವರೆಗೆ ನನಗೆ 2 ನೇ ಅರ್ಜಿದಾರರೊಂದಿಗೆ ಮಾತನಾಡಲು ಸಹ ಬಿಟ್ಟಿರುವುದಿಲ್ಲ. ನಾನು ಕೆಲಸ ಮಾಡುವ ಸ್ಥಳದಲ್ಲಿಯೂ ಸಹ ಎದುರುದಾರ ಬಂದು ನನ್ನೊಂದಿಗೆ ಜಗಳ ಮಾಡಿ ತೊಂದರೆ ಕೊಡುತ್ತಿದ್ದರು. ನಾನು ಎದುರುದಾರನ ವಿರುದ್ದ ಪ್ರಕರಣ ದಾಖಲಿಸಿದ್ದಕ್ಕಾಗಿ ಎದುರುದಾರನು ನನ್ನ ಮೇಲಾಧಿಕಾರಿಯವರ ಬಳಿ ಹೋಗಿ ನನ್ನ ಬಗ್ಗೆ ಇಲ್ಲಸಲ್ಲದ ಆರೋಪವನ್ನು ಮಾಡಿರುತ್ತಾರೆ. ಅಷ್ಟೇ ಅಲ್ಲದೇ ಎದುರುದಾರ ನನಗೆ ಕೊಲೆ ಬೆದರಿಕೆಯನ್ನು ಸಹ ಹಾಕಿರುತ್ತಾರೆ. ಊರಿನ ಹಿರಿಯರು ಮತ್ತು ಮನೆಯವರು ಪಂಚಾಯಿತಿ ನಡೆಸಿ ಎದುರುದಾರರಿಗೆ ಬುದ್ದಿವಾದ ಹೇಳಿದರೂ ಸಹ ಎದುರುದಾರ ತನ್ನ ನಡವಳಿಕಯನ್ನು ಸುಧಾರಿಸಿರುವುದಿಲ್ಲ.

7. ಎದುರುದಾರನು ಆಟೋ ನಡೆಸುತ್ತಿದ್ದು ಅವರಿಗೆ ದಿನಕ್ಕೆ 3 ಸಾವಿರ ರೂಪಾಯಿ ಆದಾಯವಿದ್ದು, ತಿಂಗಳಿಗೆ 30 ಸಾವಿರ ರೂಪಾಯಿ ದುಡಿಯುತ್ತಾರೆ. ನಾನು ಮತ್ತು 2 ಮತ್ತು 3 ನೇ ಅರ್ಜಿದಾರನು ಇಲ್ಲಿಯವರೆಗೆ ನನ್ನ ತವರು ಮನೆಯಲ್ಲಿ ಇರುತ್ತೇವೆ. ಇಂದಿನವರೆಗೂ ನಮ್ಮ ಜೀವನಾಂಶಕ್ಕಾಗಿ ಎದುರುದಾರ ಯಾವುದೇ ಖರ್ಚನ್ನು ನೀಡಿರುವುದಿಲ್ಲ. ಎದುರುದಾರನಿಗೆ ನಮ್ಮನ್ನು ಸಾಕುವಷ್ಟು ಆರ್ಥಿಕ ಹಾಗೂ ದೈಹಿಕ ಸಾಮರ್ಥ ಇರುತ್ತದೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ನೀಡಲು ಪ್ರಾರ್ಥನೆ.

ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ 1 ಮತ್ತು 1(ಎ)ಎಂದು, ಪೋಟೋವನ್ನು ನಿಪಿ.2 ಎಂದು ಗುರುತಿಸಲಾಯಿತು.

**ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**